(7) ಬೆಳಗಾವಿ ಜಿಲ್ಲೆಯಲ್ಲಿರುವ ಮಲ ಪ್ರಭಾ ಮತ್ತು ಘಟಪ್ರಭಾ ವ್ಯಾಪ್ತಿಗೆ ಬರುವ ಕೆಲವು ಸಬ್ ಡಿವಿಜನ್‌ಗಳನ್ನು ರದ್ದುಗೊಳಿಸಲು ಉದ್ದೇಶಿಸಿರುವುದರ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಇರುವ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ವ್ಯಾಪ್ತಿಗೆ ಬರುವ ಕೆಲವೊಂದು ಉಪ ವಿಭಾಗ (ಸಬ್‌ಡಿವಿಜನ್) ಹಾಗೂ ವಿಭಾಗ (ಡಿವಿಜನ್)ಗಳನ್ನು ರದ್ದುಗೊಳಿಸುವ ಪ್ರಸ್ತಾವವನ್ನು ಸರ್ಕಾರಕ್ಕೆ ಕಳಿಸಿಕೊಡಲಾಗಿದೆ ಎಂದು ತಿಳಿದು ಬಂದಿದೆ. ಇದರಿಂದ ನೀರಾವರಿ ಪ್ರದೇಶದಲ್ಲಿರುವ ರೈತವರ್ಗಕ್ಕೆ ಹಾಗೂ ಸಾರ್ವಜನಿಕರಿಗೆ ಹೇಳತೀರದಷ್ಟು ತೊಂದರೆಯಾಗುತ್ತಿದೆ. ಕೆಲಸದ ಒತ್ತಡಗಳನ್ನು ನೋಡಿ ಈ ಸಬ್ ಡಿವಿಜನ್‌ಗಳನ್ನು ಮುಂದುವರಿಸಬೇಕೆಂದು ಸಾರ್ವಜನಿಕರ ಅಭಿಪ್ರಾಯವಾಗಿರುತ್ತದೆ. ಇದರಲ್ಲಿ ಮುಖ್ಯವಾಗಿ ರಾಯಭಾಗ ಹಾಗೂ ಬೈಲಹೊಂಗಲದಲ್ಲಿರುವ ಇಲೆಕ್ಟ್ರಿಕಲ್ ಸಬ್ ಡಿವಿಜನ್‌ಗಳನ್ನು ಹಾಗೂ ನೀರಾವರಿ ಸಬ್ ಡಿವಿಜನ್‌ಗಳನ್ನು ಮುಚ್ಚುವ ಪ್ರಚಾರದ ಹಿನ್ನಲೆಯಲ್ಲಿ ಜನರು ಸರ್ಕಾರದ ಮೇಲೆ ಒತ್ತಾಯ ಬೀರುವಂತೆ ಹಾಗೂ ಸಬ್ ಡಿವಿಜನ್‌ಗಳನ್ನು ಮುಂದುವರಿಸುವಂತೆ ಪ್ರತ್ಯಕ್ಷವಾಗಿ ಹಾಗೂ ಮನವಿಗಳನ್ನು ಸಲ್ಲಿಸಿರುವ ಮೂಲಕ ವಿನಂತಿಸಿರುತ್ತಾರೆ. ಕಾರಣ ಈ ವಿಷಯವನ್ನು ಗಮನಿಸಿ ಹೇಳಿಕೆ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ನೀರಾವರಿ ಉತ್ತರ ವಲಯದ ವಿಭಾಗ ಹಾಗೂ ಉಪ ವಿಭಾಗಗಳ ಸಿಬ್ಬಂದಿ ಸ್ಥಿತಿ (ಸ್ಟಾಫಿಂಗ್ ಪೊಸಿಷನ್) ನ್ನು ಪುನರ್‌ಅವಲೋಕಿಸಿ, ಮುಖ್ಯ ಅಭಿಯಂತರರು ನೀರಾವರಿ—ಉತ್ತರ—ವಲಯದ—ಬೆಳಗಾವಿಯವರು ಕೆಲವು ವಿಭಾಗ ಹಾಗೂ ಉಪ ವಿಭಾಗಗಳನ್ನು ಮುಚ್ಚಲು ಹಾಗೂ ನಿಶ್ಚಿಯಗೊಳಿಸಲು ಪ್ರಸ್ತಾಪಿಸಿರುವುದು ಸರಿಯಷ್ಟೆ. ಈ ಪ್ರಸ್ತಾವನೆಯಲ್ಲಿ ರಾಯಭಾಗ್ ಹಾಗೂ ಬೈಲಹೊಂಗಲದಲ್ಲಿರುವ ಎಲೆಕ್ಟ್ರಿಕಲ್ ಸಬ್ ಡಿವಿಜನ್ ಹಾಗೂ ನೀರಾವರಿ ಸಬ್ ಡಿವಿಜನ್‌ಗಳನ್ನು ಮುಚ್ಚುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಮುಖ್ಯ ಅಭಿಯಂತರರ ಪ್ರಸ್ತಾವನೆಯು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಬಗ್ಗೆ ಯಾವ ತೀರ್ಮಾನವನ್ನೂ ತೆಗೆದುಕೊಂಡಿರುವುದಿಲ್ಲ. ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ರೈತವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

(8) ಮೂಡಿಗೆರೆ ತಾಲ್ಲೂಕಿನ ಕಳಸ ಟೌನ್‌ಗೆ ಕುಡಿಯುವ ನೀರಿನ ಯೋಜನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಕಳಸಾ ಟೌನಿಗೆ 1979ರಲ್ಲಿ ಕಳಸಾ ಕುಡಿಯುವ ನೀರಿನ ಯೋಜನೆ, ಸುಮಾರು 17 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಲಾಯಿತು. ಆದರೆ ಅಲ್ಲಿನ ಜನರ ದುರಾದೃಷ್ಟ ಅನ್ನಿಸುತ್ತದೆ. ಇಡೀ ಕಳಸಾ ಟೌನ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿಲ್ಲ. ಇಲ್ಲಿ ಏನು ತೊಂದರೆಯಾಗಿದೆ ಎಂದು ಇಲಾಖೆಯ ಗಮನಕ್ಕೆ ತೆಗೆದುಕೊಂಡಿಲ್ಲ. ಜೊತೆಗೆ ಇದರ ಬಗ್ಗೆ ಪರಿಹಾರವನ್ನು ಹುಡುಕುವಲ್ಲಿ ಜನಾರೋಗ್ಯ ಇಲಾಖೆ (ಪಿಹೆಚ್‌ಇ) ವಿಫಲವಾಗಿದೆ. ಇನ್ನಾದರೂ ತತ್‌ಕ್ಷಣ ಕಳಸಾ ಕುಡಿಯುವ ನೀರಿನ ಯೋಜನೆಯಿಂದ ಕಳಸ ಟೌನಿಗೆ ಸರಿಯಾಗಿ ಕುಡಿಯುವ ನೀರನ್ನು ಒದಗಿಸಲು ಆಗಬೇಕಾದ ಕೆಲಸವನ್ನು ಬೇಕಾದಷ್ಟು ಹಣ ಒದಗಿಸಿ 80 ಹೆಚ್‌ಪಿ ಮೋಟಾರ್